ಇ) ಈ ಅವಧಿಯಲ್ಲಿ (ಎರಡು ವರ್ಷದಲ್ಲಿ) ಹೊಸದಾಗಿ ನೇಮಕಗೊಳ್ಳಬೆಕಾದ ಸಿಬ್ಬಂದಿಗಿಂತ ನಿವೃತ್ತಿ ಹೊಂದಬೇಕಾಗಿದ್ದ ಸಿಬ್ಬಂದಿಗೆ ಎಷ್ಟು ಹೆಚ್ಚಿನ ವೇತನ ನೀಡಬೇಕಾಗಿದೆ (ಇಲಾಖಾವಾರು ವಿವರ ನೀಡುವುದು)

ಹೊಸದಾಗಿ ನೇಮಕವಾಗುವ ಸಿಬ್ಬಂದಿಗೆ ನೀಡುವ ವೇತನದ ಎರಡು ಪಟ್ಟು ವೇತನವನ್ನು ನಿವೃತ್ತರಾಗುವ ಸಿಬ್ಬಂದಿಯು ಪಡೆಯುತ್ತಿರುತ್ತಾರೆ. ಆದರೆ ನಿವೃತ್ತರಾಗುವ ಸಿಬ್ಬಂದಿಗೆ ಅವರ ಮೂಲ ವೇತನದ ಅರ್ಧದಷ್ಟನ್ನು ವಿಶ್ರಾಂತಿ ವೇತನವಾಗಿ ನೀಡಲಾಗುತ್ತದೆ. ಅಲ್ಲದೆ ಒಂದು ಬಾರಿಯ ಪಾವತಿಯಾಗಿ ನಿವೃತ್ತಿ ಉಪದಾನವನ್ನು ನೀಡಲಾಗುತ್ತದೆ.

ಈ) ನಿವೃತ್ತಿ ವಯಸ್ಸಿನ ಏರಿಕೆಯಿಂದ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುವುದಿಲ್ಲವೇ ಹಾಗೂ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ?

ಜುಲೈ 2008 ರಲ್ಲಿ ನಿವೃತ್ತಿ ವಯಸ್ಸನ್ನು ಹೆಚ್ಚಿಸಲು ಪರಿಶೀಲಿಸಿದಾಗ ರಾಜ್ಯದ ವಿವಿಧ ಇಲಾಖೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಹುದ್ದೆಗಳಿದ್ದವು. ನಿರುದ್ಯೋಗಿ ಯುವಕರು ಅವಕಾಶ ವಂಚಿರಾಗುವುದನ್ನು ತಪ್ಪಿಸಲು ಸರ್ಕಾರಿ ಸೇವೆಗೆ ಸೇರಲು ನಿಗದಿಪಡಿಸಿದ್ದ ಗರಿಷ್ಟ ವಯೋಮಿತಿಯನ್ನು 2 ವರ್ಷಗಳಷ್ಟು ಹೆಚ್ಚಿಸಿ ದಿನಾಂಕ 18.12.08 ರಿಂದ ಜಾರಿಗೆ ಬರುವಂತೆ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ. ಈ ಎಲ್ಲಾ ಕಾರಣಗಳಿಂದ ನಿರುದ್ಯೋಗ ಸಮಸ್ಯೆಯು ಹೆಚ್ಚಾಗುವ ಅವಕಾಶವಿರುವುದಿಲ್ಲ.

144 ಬಾಲಕೃಷ್ಣ ಹೆಚ್.ಪಿ.(ಮಾಗಡಿ)

ಡಾ॥ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) ವಿಧಾನಸೌಧದ ಮುಂಭಾಗದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ಸ್ಥಾಪಿಸಲು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಿರ್ಣಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇಲ್ಲ. ದಿವಂಗತ ನೇತಾಜಿ ಸುಭಾಶ್ ಚಂದ್ರ ಬೋಸ್ ಹಾಗೂ ಎಸ್.ನಿಜಲಿಂಗಪ್ಪ ರವರುಗಳ ಸ್ಮಾರಕಗಳನ್ನು ವಿಧಾನಸೌಧದ ಅಸುಪಾಸಿನಲ್ಲಿ ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ವಿಧಾನಸೌಧದ ಸುತ್ತಮುತ್ತ ಈ ರೀತಿಯ ಪ್ರತಿಮೆ, ಪುತ್ಥಳಿ ಇತ್ಯಾದಿಗಳನ್ನು ಸ್ಥಾಪಿಸದಂತೆ ನಿರ್ಬಂಧಗಳನ್ನು ವಿಧಿಸಿ ರಾಜ್ಯ ಉಚ್ಚ ನ್ಯಾಯಾಲಯವು 2001ನೇ ಸಾಲಿನಲ್ಲಿ ತೀರ್ಪು ನೀಡಿರುತ್ತದೆ. ಈ ಕಾರಣದಿಂದಾಗಿ ಪ್ರತಿಮೆ ಸ್ಥಾಪನೆ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಹಾಗಾದರೆ ಈ ಪ್ರತಿಮೆ ಸ್ಥಾಪನೆಗೆ ಎಷ್ಟು ಹಣವನ್ನು ಕಾಯ್ದಿರಿಸಲಾಗಿತ್ತು

ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ವಿಷಯದಲ್ಲಿ ತಜ್ಞರ ಸಲಹೆಯನ್ನು ಪಡೆದು ಈಗಾಗಲೇ ಪ್ರತಿಮೆ ಕೆಲಸ ಪ್ರಾರಂಭವಾಗಿದ್ದಿದ್ದು ನಿಜವೇ

ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಪ್ರತಿಮೆ ಅನಾವರಣದ ಬಗ್ಗೆ ಇಷ್ಟು ವಿಳಂಬವಾಗಲು ಕಾರಣಗಳೇನು;

ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಎಷ್ಟು ದಿನದಲ್ಲಿ ಪ್ರತಿಮೆಯನ್ನು ಅನಾವರಣ ಮಾಡಲಾಗುವುದು?

ಪ್ರಶ್ನೆ ಉದ್ಭವಿಸುವುದಿಲ್ಲ.

145 ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್

ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಅ) ಸೇಡಂ ಮತಕ್ಷೇತ್ರಕ್ಕೊಳಪಟ್ಟ ವಾಗದಿರಿ–ರಿಬ್ಬನಪಲ್ಲಿ ರಸ್ತೆ (ರಾಜ್ಯ ಹೆದ್ದಾರಿ–10) ಮತ್ತು ವನಮಾರಪಳ್ಳಿ–ರಾಯಚೂರು(ರಾಜ್ಯ ಹೆದ್ದಾರಿ–15) ರಸ್ತೆಗಳು ಸಂಪೂರ್ಣ ಹಾಳಾಗಿದ್ದು ಜನರಿಗೆ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ವಾಗದರಿ–ರಿಬ್ಬನಪಲ್ಲಿ ರಸ್ತೆ (ರಾಜ್ಯ ಹೆದ್ದಾರಿ–10) ಮತ್ತು ವನಮಾರಪಳ್ಳಿ–ರಾಯಚೂರು ರಸ್ತೆ(ರಾಜ್ಯ ಹೆದ್ದಾರಿ–15) ಈ ಎರಡೂ ರಸ್ತೆಗಳ ಗುಂಡಿಮುಚ್ಚುವ ಕಾಮಗಾರಿಯನ್ನು 3 ವರ್ಷಗಳ ನಿರ್ವಹಣೆಯ ಪ್ಯಾಕೇಜ್ ಅಡಿಯಲ್ಲಿ ಕೈಗೊಳ್ಳಲಾಗಿದೆ. ಈ ರಸ್ತೆಗಳ ಅತೀ ಹೆಚ್ಚು ಹಾಳಾದ ಭಾಗಗಳ ದುರಸ್ತಿಗೆ ವಿಶೇಷ ಅನುದಾನ ಮಂಜೂರಾಗಿದ್ದು, ಸದರಿ ಕಾಮಗಾರಿಗಳು ಸಹ ಪ್ರಗತಿಯಲ್ಲಿದ್ದು, ಈ ಎರಡೂ ರಸ್ತೆಗಳಷ್ಟು ದುರಸ್ತಿಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು.

ಆ) ಸೇಡಂ ಮತಕ್ಷೇತ್ರಕ್ಕೆ ಒಳಪಟ್ಟ ಗ್ರಾಮೀಣ ರಸ್ತೆಗಳು ಜಿಲ್ಲಾ ಮುಖ್ಯ ರಸ್ತೆಗಳೆಂದು ಮೇಲ್ದರ್ಜೇಗೇರಿಸುವ ಪ್ರಸ್ತಾವನೆ ಸರ್ಕಾರದ ಗಮನದಲ್ಲಿಯೇ; ಹಾಗಿದ್ದಲ್ಲಿ, ಅವು ಯಾವುವು ಹಾಗೂ ಸರ್ಕಾರ ಇದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಿದೆ?

ಸರ್ಕಾರಿ ಆದೇಶ ಸಂಖ್ಯೆ: ಲೋಇ 579 ಸಿಆರ್ಎಂ 2008, ದಿನಾಂಕ: 10–2–2009ರಲ್ಲಿ ಗುಲ್ಬರ್ಗಾ ಜಿಲ್ಲೆ ಸೇಡಂ, ತಾಲ್ಲೂಕಿನ ಒಟ್ಟು 181.50 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ.

146 ಡಾ॥ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್(ಸೇಡಂ)

ಡಾ॥ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)